# ಮೈಸೂರು ಸಂಸ್ಥಾನದಲ್ಲಿನ ರಾಜಾಶ್ರಯದ ಕ್ರೀಡೆಗಳು: ಒಂದು ನೋಟ

**ವಸಂತ ಪೂರ್ಣಿಮ**
ಸಹಾಯಕ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಸ.ಪ್ರ.ದ.ಕಾಲೇಜು
ಶಿರಹಟ್ಟಿ.

**Article Link: https://aksharasurya.com/2024/04/vasantha-poornima.php**

**DOI: https://doi.org/10.5281/zenodo.10930680**

## ABSTRACT:

ಹೆಸರೇ ಹೇಳುವಂತೆ 'ಮೈ ಮನ ಸೂರೆಗೊಳ್ಳುವ' ಮೈಸೂರು ಜಗದ್ವಿಖ್ಯಾತವಾಗಿರುವುದು ತನ್ನ ವಿಶಿಷ್ಟ ಸಾಂಸ್ಕೃತಿಕ ಕೊಡುಗೆ ಹಾಗೂ ಸಾಮಾಜಿಕ ಸುಧಾರಣೆಗಳಿಂದ. ಬ್ರಿಟಿಷ್ ಪ್ರಭುತ್ವದಡಿಯಲ್ಲೋ ಅಥವಾ ತನ್ನ ಆಧುನಿಕ ಸುಧಾರಣಿಗಳಿಂದಲೋ ಮೈಸೂರಿನ ಸರ್ವತೋಮುಖ ಅಭಿವೃದ್ಧಿಗೆ ನೆರವಾದ ಮೈಸೂರಿನ ಆಳರಸರು ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಢಿಸಿದ್ದಾರೆ. ರಾಜ ಪ್ರಭುತ್ವ ಕಾಲದಲ್ಲಿ ಯುದ್ದ ವಿದ್ಯೆ ಅಥವಾ ಸೈನಿಕ ಕಲೆಗಳೆನಿಸಿಕೊಂಡಿದ್ದ ಕುದುರೆ ಸವಾರಿ, ಕತ್ತಿವರಸೆ, ಕುಸ್ತಿ, ಬಿಲ್ಲುಗಾರಿಕೆ, ಭರ್ಜಿ ಎಸೆತ, ಪೋಲೋ, ಕವಾಯಿತು, ವ್ಯಾಯಾಮ ಮೊದಲಾದವು ಇಂದು ಕ್ರೀಡಾಕ್ಷೇತ್ರಕ್ಕೆ ಸೇರ್ಪಡೆಗೊಂಡು ದೈಹಿಕ ಹಾಗೂ ಬೌದ್ಧಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಈ ನಿಟ್ಟಿನಲ್ಲಿ ಮೈಸೂರು ಸಂಸ್ಥಾನ ತೆಗೆದುಕೊಂಡ ನಿಲುವುಗಳು ನಿಜಕ್ಕೂ ಅಧ್ಯಯನಕ್ಕೆ ಅರ್ಹವಾದವು. ದಸರಾ ಹಬ್ಬದ ಸಂದರ್ಭದಲ್ಲಿ ವಿಶೇಷ ಕ್ರೀಡಾಕೂಟಗಳನ್ನು ಏರ್ಪಡಿಸಿ ದೇಶ ವಿದೇಶಗಳಿಂದ ಕ್ರೀಡಾಪಟುಗಳನ್ನು ಆಮಂತ್ರಿಸುವ ಮೂಲಕ ಸಮಕಾಲೀನ ಸಂಸ್ಥಾನಗಳ ನಡುವೆ ವಿಭಿನ್ನವಾಗಿ ನಿಲ್ಲುವ ಮೈಸೂರು, ಆಂಗ್ಲೋ ಮೈಸೂರು ಯುದ್ದಗಳ ನಂತರ ಬ್ರಿಟಿಷರ ಪ್ರಭಾವಕ್ಕೆ ಒಳಗಾಗಿ ಆಧುನೀಕರಣಕ್ಕೆ ಬಹಳ ಬೇಗ ಒಗ್ಗಿಕೊಂಡು ಕ್ರೈಸ್ತ ಮಿಷನರಿಗಳ ಹಾದಿಯಲ್ಲಿಯೇ ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಮುಂದಾಗಿ ಇದರಲ್ಲಿ ದೈಹಿಕ ಶಿಕ್ಷಣದ ಅಗತ್ಯತೆಯನ್ನು ಮನಗಂಡು ಅದನ್ನು ಶಾಲಾ ಕೋರ್ಸ್ನ ಭಾಗವೆಂದು ಪರಿಗಣಿಸಿ ಇದಕ್ಕೆ ಪ್ರತ್ಯೇಕ ಶಿಕ್ಷಕ ಹಾಗೂ ತರಬೇತಿಯನ್ನು ಕಡ್ಡಾಯಗೊಳಿಸಿತಲ್ಲದೇ ಅಂತರ ಶಾಲಾ ಕ್ರೀಡಾಕೂಟದ ಆಯೋಜನೆಗೆ ಅವಕಾಶ ಕಲ್ಪಿಸಿಕೊಟ್ಟಿತು. ಇಂತಹ ಅಭಿವೃದ್ಧಿ ಪರ ಸಂಸ್ಥಾನದಲ್ಲಿ ಪುರಾತನ ಕ್ರೀಡೆಗಳು ಬೆಳೆದು ಬಂದ ಬಗೆಯ ಕಿರು ನೋಟ ನೀಡುವಂತಹ ಪ್ರಯತ್ನವನ್ನು ಮಾಡುವ ಉದ್ದೇಶವನ್ನು ಈ ಲೇಖನ ಒಳಗೊಂಡಿದೆ.

## KEYWORDS:

ಗಂಜೀಫ, ಬೋರ್ಡ್ ಆಟಗಳು, ಬೇಟೆ, ಕುಸ್ತಿ, ಪೋಲೋ (ಚೌಗಾನ್).

ವಿಜಯನಗರ ಕಾಲದಿಂದಲೇ ನವರಾತ್ರಿ ಸಮಯದಲ್ಲಿ ಸೈನಿಕ ಕವಾಯಿತು ನಡೆಯುವ ಸಂದರ್ಭದಲ್ಲಿ ವಿವಿಧ ಯುದ್ಧವಿದ್ಯೆಗಳು ಅರಸರ ಮುಂದೆ ಪ್ರದರ್ಶಿತವಾಗುತ್ತಿದ್ದವೆಂಬುದು ಇತಿಹಾಸದ ದಾಖಲೆಗಳಿಂದ ತಿಳಿದುಬರುತ್ತದೆ ಮುಂದೆ ಇವರ ಸಾಮಂತರಾಗಿದ್ದ ಯದುರಾಯ ಮತ್ತು ಕೃಷ್ಣ ಮೈಸೂರು ಒಡೆಯರ್ ಮನೆತನವನ್ನು ಸ್ಥಾಪಿಸಿ ವಿಜಯನಗರದ ಪರಂಪರೆಯನ್ನು ಮುಂದುವರೆಸಿದರು. ರಾಜಒಡೆಯರ್ ದಸರ ಆಚರಣೆಯನ್ನು ಪುನಃ ಜಾ ರಿಗೆ ತಂದು ಈ ಸೈನಿಕ ಕವಾಯಿತು ಮೆರವಣಿಗೆಗಳನ್ನು ಪುನರಾರಂಭಿಸಿದರು. ಇನ್ನು ರಣಧೀರರೆಂದೇ ಖ್ಯಾತರಾಗಿದ್ದ ಕಂಠೀರವ ನರಸರಾಜ ಒಡೆಯರ್ ಕತ್ತಿವರಸೆ ಮತ್ತು ಕುಸ್ತಿಕಲೆಯಲ್ಲಿ ನಿಷ್ಣಾತರಾಗಿದ್ದರು. ಚಿಕ್ಕದೇವರಾಜ ಒಡೆಯರ್ ಕಾಲದಲ್ಲಿ ದೇಹದಾಢ್ಯತೆಯ ಅರ್ಹತೆಯ ಮೇಲೆ ಸೈನ್ಯಕ್ಕೆ ನೇಮಕ ಮಾಡಿಕೊಳ್ಳುವ ವ್ಯವಸ್ಥೆ ಜಾರಿಗೆ ಬಂತೆಂಬುದರ ಬಗ್ಗೆ ಮಾಹಿತಿಗಳು ಲಭ್ಯವಿವೆ. ಟಿಪ್ಪು ಹಾಗೂ ಹೈದರನ ಆಳ್ವಿಕೆಯ ನಂತರದಲ್ಲಿ ಮೈಸೂರು ರಾಜ್ಯದ ಪುನರ್ಸ್ಥಾಪನೆಯ ನಂತರ ಅಧಿಕಾರವಹಿಸಿಕೊಂಡ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಬ್ರಿಟಿಷರ ಪ್ರಭಾವದಿಂದ ಸಂಸ್ಥಾನವು ಆಧುನಿಕ ರೂಪ ಪಡೆಯಲಾರಂಭಿಸಿದ್ದು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಮೊದಲಾದ ಕ್ಷೇತ್ರಗಳು ಸಾಕಷ್ಟು ಬದಲಾವಣೆ ಕಂಡಿತು. ಇದಕ್ಕೆ ಮೈಸೂರು ಆಳರಸರ ಆಸಕ್ತಿಯೂ ಕಾರಣವಾಗಿತ್ತು. ಈಗಾಗಲೇ ಸಂಸ್ಥಾನದಲ್ಲಿ ಕ್ರೈಸ್ತಮಿಷನರಿಗಳು ಹಾಗೂ ಸರ್ಕಾರದ ಪ್ರಯತ್ನದಿಂದ ಹಲವಾರು ಶಾಲಾ–ಕಾಲೇಜುಗಳು ಸ್ಥಾಪಿತವಾಗಿದ್ದು ಅವುಗಳು ಕ್ರೀಡೆಗೆ ಅಗತ್ಯ ಆದ್ಯತೆ ನೀಡದ್ದರ ಬಗ್ಗೆ ಸಾಕಷ್ಟು ನಿದರ್ಶನಗಳಿವೆ. ಮುಂದೆ ಪಾಶ್ಚಿಮಾತ್ಯ ಕ್ರೀಡೆಗಳ ಆಗಮನ ಹಾಗೂ ಸಂಸ್ಥಾನದಲ್ಲಿ ಅವುಗಳಿಗೆ ನೀಡಲಾದ ಆದ್ಯತೆ, ಅದರ ಜನಪ್ರಿಯತೆಯನ್ನು ಮನಗಂಡು ಸರ್ಕಾರ ಅಂತರ ಶಾಲಾ ಕ್ರೀಡಾಕೂಟ ಹಾಗೂ ದಸರಾ ಕ್ರೀಡಾಕೂಟಗಳನ್ನು ಆಯೋಜಿಸಿ ಅದಕ್ಕೆ ಅನುದಾನ ನೀಡುವ ಮೂಲಕ ವಿದ್ಯಾರ್ಥಿಗಳ ದೈಹಿಕ ಸ್ವಾಸ್ಥ್ಯ, ಮಾನಸಿಕ ಆರೋಗ್ಯ ಕಾಪಾಡಲು ಹಾಗೂ ಕೌಶಲವೃದ್ದಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಮುಂದುವರೆಯಿತು. ಕಮಿಷನರ್‌ಗಳ ಆಡಳಿತಾವಧಿಯಲ್ಲಿ 1876ರಲ್ಲಿ The Unitied Athletic Sports for Students of School ಅನ್ನು ಪ್ರಾರಂಭಿಸಲಾಯಿತು ಜೊತೆಗೆ ವೃತ್ತಿಪರವಾಗಿ ಕ್ರೀಡೆಯನ್ನು ಅನುಸರಿಸಲು ಅಗತ್ಯವಾಗುವಂತೆ ಶಾಲಾಕಾಲೇಜುಗಳಲ್ಲಿ ಕ್ರೀಡೆ, ಡ್ರಿಲ್ ಮತ್ತು ದೈಹಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿತು. ನಾಲ್ವಡಿಯವರ ಕಾಲದಲ್ಲಿ ಹೆಣ್ಣುಮಕ್ಕಳಿಗೂ ಕ್ರೀಡಾಶಿಕ್ಷಣದ ಅವಶ್ಯಕತೆ ಮನಗಂಡು ಅದನ್ನು ಪ್ರೋತ್ಸಾಹಿಸಿದರು. ಯುವರಾಜ ಕಂಠೀರವ ನರಸರಾಜರು ಸ್ವತಃ ಸ್ಕೌಟ್ ಆಗಿದ್ದು ಅದರ ಅಭಿವೃದ್ದಿಗೆ ಅಗತ್ಯವಾದ ಬೆಂಬಲ

ಸರ್ಕಾರದಿಂದ ದೊರೆಯುವಂತೆ ಮಾಡಿದ್ದಲ್ಲದೆ, ಹೆಣ್ಣುಮಕ್ಕಳ ಘಟಕವಾದ ಗೈಡ್ಸ್ ಅನ್ನು ತೆರೆಯಲು ಅಗತ್ಯವಾದ ನೆರವು ದೊರಕುವಂತೆ ಮಾಡಿಕೊಟ್ಟರು.

**ಕೆಲವು ಪಾರಂಪರಿಕ ರಾಜಾಶ್ರಯದ ಕ್ರೀಡೆಗಳು:**

ಗಂಜೀಫ–ಬೌದ್ಧಿಕ ಬೆಳವಣಿಗೆ ಹಾಗೂ ಕಲಾ ನೈಪುಣ್ಯಕ್ಕೆ ಹೆಸರಾಗಿದ್ದ ಪ್ರಾಚೀನ ಇಸ್ಪೀಟ್ ಮಾದರಿ ಆಟವೇ ಗಂಜೀಫ. 'ಗಂಜ್' ಎಂದರೆ ನಿಧಿ ಹಾಗೂ 'ಇಫಾ' ಎಂದರೆ ಬೆಟ್ಟಿಂಗ್, ಬಾಜಿ ಕಟ್ಟುವ ಎಂಬ ಅರ್ಥ ಹೊಂದಿದೆ. ಮೂಲ ಪರ್ಶಿಯಾದ ಸಫಾವಿ ಮನೆತನದಿಂದ ಭಾರತಕ್ಕೆ ಪರಿಚಯಿಸಲ್ಪಟ್ಟು ಮೊಗಲರ ಆಶ್ರಯದಲ್ಲಿ ಬೆಳವಣಿಗೆ ಕಂಡು ಮುಂದೆ ಟರ್ಕರಿಂದ ದಖನ್ನಿಗೆ ಪರಿಚಯವಾಗಿ ಮಹಾರಾಷ್ಟ್ರ, ಒರಿಸ್ಸಾ ಹಾಗೂ ಕರ್ನಾಟಕದಲ್ಲಿ ರಾಜಾಶ್ರಯ ಪಡೆದುಕೊಂಡಿತು. ಅದರಲ್ಲೂ ನಮ್ಮ ಮೈಸೂರಿನ ಮಹಾರಾಜರಾದ ಮುಮ್ಮಡಿ ಕೃಷ್ಣರಾಜರು ಗಂಜೀಫ (ಇಸ್ಪೀಟ್ ಮಾದರಿ) ಆಟದಲ್ಲಿ ನಿಷ್ಣಾತರಾಗಿದ್ದು ಹಲವು ಹೊಸ ಸಂಕೀರ್ಣವಾದ ಪಟ್ಟುಗಳನ್ನು ತಾವೇ ಹುಟ್ಟು ಹಾಕಿದ್ದರು. ಹಿಂದೂ ಪೌರಾಣಿಕ ಕಥನಗಳ ಆಧಾರದ ಮೇಲೆ 13 ವಿಧದ ಗಂಜೀಫದ ಕಾರ್ಡ್‌ಗಳನ್ನು ತಯಾರಿಸಿ ಇವುಗಳನ್ನು ವಿಶೇಷವಾಗಿ 'ಛದ್'(ದೇವರ ಆಟ) ಎಂದು ಕರೆಯಲಾಯಿತು. ಇದರಲ್ಲಿ ಚಾಮುಂಡೇಶ್ವರಿ ಹಾಗೂ ದಶಾವತಾರ ಛದ್ಗಳು ಪ್ರಮುಖವಾದವು. ಜಗನ್ಮೋಹನಆರ್ಟ್ ಗ್ಯಾಲರಿಯಲ್ಲಿ ಇದಕ್ಕೆ ಸಂಬಂಧಿಸಿದ ಕೆಲವು ವರ್ಣಚಿತ್ರ ಹಾಗೂ ಆಟದ ಕಾರ್ಡ್‌ಗಳನ್ನು ಕಾಣಬಹುದು. ಅಲ್ಲದೇ ಇವರು ರಚಿಸಿದ ಶ್ರೀತತ್ವನಿಧಿಯ ಕೌತುಕನಿಧಿ ಭಾಗವುಹಠ ಯೋಗದ ಭಂಗಿಗಳ ಜೊತೆಗೆ ಚದುರಂಗ ಆಟದ ಬಗ್ಗೆಯೂ ಸಹ ಬಹಳ ಮಾಹಿತಿ ನೀಡುತ್ತದೆ.

ಚೆಸ್–ಮೈಸೂರು ಸಂಸ್ಥಾನದಲ್ಲಿ ಹಾವು–ಏಣಿ ಹಾಗೂ ಚದುರಂಗದಂತಹ ಬೋರ್ಡ್ ಆಟಗಳು ಹೆಚ್ಚು ಜನಪ್ರಿಯವಾಗಿದ್ದು ಮಾತ್ರವಲ್ಲದೇ ಇಂತಹ ಆಟಗಳ ಬೋರ್ಡ್ಗಳ ತಯಾರಿಕೆಯಲ್ಲಿಯೂ ಖ್ಯಾತಿಗಳಿಸಿತ್ತು. ಮಹಾರಾಜರ ಕಾಲಕ್ಕೆ ಸಂಬಂಧಿಸಿದ ದಂತದಿಂದ ಕೆತ್ತಲ್ಪಟ್ಟ ರೋಸ್‌ವುಡ್‌ನ ರಿವರ್ಸಬಲ್ ಬೋರ್ಡ್ 1982 ಲಂಡನ್ನ ಮ್ಯೂಸಿಯಂವೊಂದರಲ್ಲಿ ಪತ್ತೆಹಚ್ಚಲಾಗಿದೆ. ಜೊತೆಗೆ ಸಂಖ್ಯಾತ್ಮಕ ಚದುರಂಗ ಕೋಷ್ಠಕವನ್ನೊಳಗೊಂಡ ಚೆಸ್ ಬೋರ್ಡ್ ಸಹ ವಿಕ್ಟೋರಿಯಾ ಆಲ್ಬರ್ಟ್ ಮ್ಯೂಸಿಯಂನಲ್ಲಿ ದೊರೆತಿದೆ ಇದೆಲ್ಲಾ ಮುಮ್ಮಡಿಯವರ ಅವಧಿಯಲ್ಲಿ ನಿರ್ಮಿತವಾಯಿತ್ತೆಂದು ಹೇಳಲಾಗಿದೆ.

ಬೇಟೆ– ಮೈಸೂರು ಮಹಾರಾಜರ ಪ್ರಿಯವಾದ ಮತ್ತೊಂದು ಮನರಂಜನಾ ಸಾಧನವೆಂದರೆ ಅದೇ ಬೇಟೆಗಾರಿಕೆ. ಅಂದಿನ ದಿನಗಳಲ್ಲಿ ಇದು ಒಂದು ಪ್ರತಿಷ್ಠೆಯ

ದ್ಯೋತಕವಾಗಿತ್ತು. ಸಂಸ್ಥಾನಕ್ಕೆ ಭೇಟಿ ನೀಡಿದ ಸಾಕಷ್ಟು ಪ್ರವಾಸಿಗರು ಇದರ ಬಗ್ಗೆ ಮಾಹಿತಿಯನ್ನು ತಮ್ಮ ಗ್ರಂಥಗಳಲ್ಲಿ ದಾಖಲಿಸಿರುವುದನ್ನು ಕಾಣಬಹುದು. ಮಹಾರಾಜರು ಬೇಟೆಯಾಡಿದ ಪ್ರಾಣಿಗಳ ಅವಶೇಷಗಳನ್ನು ಮೈಸೂರು ಅರಮನೆಯಲ್ಲಿ ಇಂದಿಗೂ ನೋಡಬಹುದು. ಆರಂಭದಲ್ಲಿ ಪ್ರಾಣಿಗಳನ್ನು ಬೇಟೆಯಾಡಲು ಸಂಸ್ಥಾನದಲ್ಲಿ ಯಾವುದೇ ಕಾನೂನಿನ ನಿರ್ಬಂಧ ಇರಲಿಲ್ಲ ಹಾಗೂ ಚರ್ಮದ ಉತ್ಪನ್ನಗಳ ತಯಾರಿಕೆಯಲ್ಲಿ ಬಹಳ ಪ್ರಸಿದ್ಧತೆ ಪಡೆದಿತ್ತು. ರೈತರ ಬೆಳೆಗಳನ್ನು ಹಾಳು ಮಾಡುತ್ತಿದ್ದ ಆನೆಗಳನ್ನು ಬೇಟೆಯಾಡಿದವರಿಗೆ ಸರ್ಕಾರವೇ ಬಹುಮಾನ ನೀಡುವ ಪದ್ಧತಿ ರೂಢಿಯಲ್ಲಿತ್ತು. ನಂತರದಲ್ಲಿ ಸರಕಾರವು ಖೆಡ್ಡಾ ತೋಡುವ ಮೂಲಕ ಆನೆಗಳನ್ನು ಸೆರೆ ಹಿಡಿಯುವ ಹಾಗೂ ಅವುಗಳನ್ನು ಪಳಗಿಸಿ ಮರದ ದಿಮ್ಮಿಗಳನ್ನು ಸಾಗಿಸುವ ಕಾರ್ಯಗಳಿಗೆ ಬಳಸಿಕೊಳ್ಳಲಾರಂಭಿಸಿದರು. ದಸರಾ ಹಬ್ಬದ ಸಂದರ್ಭದಲ್ಲಿ ಮನರಂಜನೆಗಾಗಿ ಹುಲಿಗಳ ಕಾಳಗ ಏರ್ಪಡಿಸಲಾಗುತ್ತಿತ್ತು. ಕ್ರಮೇಣ ಹುಲಿ ಮತ್ತು ಇತರೆ ಕಾಡುಪ್ರಾಣಿಗಳ ಬೃಹತ್ ಪ್ರಮಾಣದ ಹತ್ಯೆಯು ಮಹಾರಾಜರ ಸರ್ಕಾರವನ್ನು ಗಾಬರಿಗೊಳಿಸಿತು. ಇದನ್ನು ಗಮನಿಸಿದ ಮಹಾರಾಜ 10ನೇ ಚಾಮರಾಜ ಒಡೆಯರ್ ಹಾಗೂ ಅವರ ಪುತ್ರ ನಾಲ್ವಡಿ ಕೃಷ್ಣರಾಜರು ಕಾಡು ಪ್ರಾಣಿಗಳ ರಕ್ಷಣೆಯಲ್ಲಿ ದಿಟ್ಟ ಹೆಜ್ಜೆಗಳನಿಟ್ಟರು. ಬೇಟೆಯಲ್ಲಿ ಗಾಯಗೊಂಡ ಪ್ರಾಣಿಗಳನ್ನು ರಕ್ಷಿಸುವ ಸಲುವಾಗಿ ಚಾಮರಾಜ ಒಡೆಯರು 1892ರಲ್ಲಿ ಪಂಜರ ವ್ಯವಸ್ಥೆ ಕಲ್ಪಿಸುವ ಮೂಲಕ ಇಂದಿನ 'Mysore Zoo' ಸ್ಥಾಪನೆಗೆ ಕಾರಣರಾದರು. 1901ರಲ್ಲಿ The Mysore Game and Fish Preservation Regulation Act ಜಾರಿಗೊಳಿಸಿ ಕಾಡುಪ್ರಾಣಿ ಹಾಗೂ ಪಕ್ಷಿಗಳ ಬೇಟೆಯನ್ನು ನಿಷೇಧಿಸಲಾಯಿತು. ಮಹಾರಾಜರ ಪ್ರಿಯ ಪ್ರಾಣಿಯಾಗಿದ್ದ ಹುಲಿಗಳ ಸಂತತಿಯ ಸಂರಕ್ಷಣೆಗೆ ಸರ್ಕಾರ ಮುಂದಾಗಿ 1932ರಲ್ಲಿ ವೇಣುಗೋಪಾಲ ಅಭಯಾರಣ್ಯವನ್ನು ಹುಲಿ ಸಂರಕ್ಷಿತ ಅರಣ್ಯವಾಗಿ ಘೋಷಿಸಿತು. ಮುಂದೆ ಇದೇ ಬಂಡೀಪುರ ರಾಷ್ಟ್ರೀಯ ಉದ್ಯಾನವನವಾಯಿತು.

ಕುಸ್ತಿ–ಇದು ಭಾರತದ ಪ್ರಾಚೀನ ಮತ್ತು ಜನಪ್ರಿಯ ಕ್ರೀಡೆಯಾಗಿದ್ದು ಪ್ರಸ್ತುತದವರೆಗೂ ತನ್ನ ಅಸ್ತಿತ್ವ ಉಳಿಸಿಕೊಂಡು ಬಂದಿರುವುದು ಕಾಣಬಹುದು. ಹಲವು ರಾಜಮನೆತನಗಳ ಪೋಷಣೆಯಲ್ಲಿ ಸಾಕಷ್ಟು ಬೆಳವಣಿಗೆ ಕಂಡ ಇದು ಕರ್ನಾಟಕದಲ್ಲಿ ಮೈಸೂರು ರಾಜಮನೆತನದ ಕೃಪಾಕಟಾಕ್ಷಕ್ಕೆ ಒಳಗಾಗಿ ರಾಜಾಶ್ರಯ ಪಡೆದಿತ್ತು. ಸ್ವತಃ ಕುಸ್ತಿಪಟುವಾಗಿದ್ದ ಕಂಠೀರವ ನರಸರಾಜರು ವೇಷಮರೆಸಿಕೊಂಡು ತಿರುಚನಾಪಳ್ಳಿಗೆ ಹೋಗಿ ಅಲ್ಲಿನ ಜಟ್ಟಿಗಳಿಗೆ ಸವಾಲೆಸೆದು ಅವರನ್ನು ಸೋಲಿಸಿ ಬಂದ ವಿಚಾರವನ್ನು ಇತಿಹಾಸದ ದಾಖಲೆಗಳಿಂದ

ತಿಳಿಯಬಹುದು. ನಾಲ್ವಡಿಯವರ ಕಾಲದಲ್ಲಿ ಈ ಕಲೆಯು ಸಾಕಷ್ಟು ಅಭಿವೃದ್ಧಿ ಕಂಡಿದ್ದು, ಹಲವು ಗರಡಿಮನೆಗಳು ತಲೆಯೆತ್ತಿದವು. ಸಾಮಾನ್ಯವಾಗಿ ಜಗನ್ಮೋಹನ ಅರಮನೆಯಲ್ಲಿ ಟೂರ್ನಮೆಂಟ್ಗಳನ್ನು ಆಯೋಜಿಸಲಾಗುತ್ತಿದ್ದು ಉಸ್ತಾದ್ ಶ್ರೀನಿವಾಸಣ್ಣ, ಉಸ್ತಾದ್ ಶೆಟ್ಟಣ್ಣ, ಮಾಯಣ್ಣ ಮತ್ತು ಗರಡಿರಾಮಣ್ಣ ಇವರ ಕಾಲದ ಪ್ರಸಿದ್ದ ಪೈಲ್ವಾನರಾಗಿದ್ದರು. ದಸರಾ ಹಬ್ಬದ ಕಡೆಯ ದಿನದಂದು ಅರಮನೆಯ ಆವರಣದಲ್ಲಿ ವಜ್ರಮುಷ್ಠಿ ಕಾಳಗ ನಡೆಸುವುದನ್ನು ನಾವು ಇಂದಿಗೂ ಕಾಣಬಹುದು. ಮೈಸೂರಿನ ದೊಡ್ಡಕರೆ ಮೈದಾನದಲ್ಲಿ ಸಾಹುಕಾರ್ ಚೆನ್ನಯ್ಯನವರ ಹೆಸರಿನಲ್ಲಿ ಕುಸ್ತಿ ಅಖಾಡ ಸ್ಥಾಪಿಸಲಾಗಿದೆ.

ಚೌಗನ್ ಕುದುರೆ ಮೇಲೆ ಕುಳಿತು ಉದ್ದವಾದ ಕೋಲಿನಿಂದ ಚೆಂಡನ್ನು ಹೊಡೆಯುವಂತಹ ಈ ಆಟವು ರಾಜರ ಕ್ರೀಡೆ ಎಂದೇ ಹೆಸರುವಾಸಿಯಾಗಿದ್ದು ಪರ್ಷಿಯಾ ಮೂಲದಿಂದ ದೆಹಲಿ ಸುಲ್ತಾನರ ಕಾಲದಲ್ಲಿ ಭಾರತಕ್ಕೆ ಪರಿಚಯಿಸಲ್ಪಟ್ಟು ಮೊಗಲರ ಕಾಲದಲ್ಲಿ ಸಾಕಷ್ಟು ಖ್ಯಾತಿ ಪಡೆಯಿತು. ಆದರೆ ಕರ್ನಾಟಕದಲ್ಲಿ ಈ ಕ್ರೀಡೆ ರಾಷ್ಟ್ರಕೂಟರ ಕಾಲದಿಂದಲೇ ರೂಢಿಯಲ್ಲಿದ್ದ ಬಗ್ಗೆ ಸಾಕಷ್ಟು ದಾಖಲೆಗಳು ದೊರೆತಿವೆ. ಶಿವಮೊಗ್ಗ ಜಿಲ್ಲೆಯ ಹೊಂಬುಜಾ ಎಂಬಲ್ಲಿ ಈ ಕ್ರೀಡೆ ಆಡುತ್ತಿದ್ದರ ಬಗ್ಗೆ ಸ್ತಂಭಶಾಸನವು ದೊರೆತಿದ್ದು ಇದು ಶಂತಾರ ಅರಸರ ಕಾಲಕ್ಕೆ ಸಂಬಂಧಿಸಿತ್ತೆಂದು ತಿಳಿದು ಬರುತ್ತದೆ. ಇನ್ನೂ ಮೈಸೂರು ಒಡೆಯರ್ ಕಾಲದಲ್ಲಿ ಈ ಕ್ರೀಡೆಯು ರಾಜಾಶ್ರಯ ಪಡೆದು ತನ್ನ ಸ್ವರೂಪದಲ್ಲಿ ಹಲವಾರು ಮಾರ್ಪಾಡುಗಳನ್ನು ಕಂಡುಕೊಂಡ ಬಗೆ ತಿಳಿಯಬಹುದು. ಬಾಲ್ಯದಿಂದಲೇ ಮಹಾರಾಜರಿಗೆ ಪೋಲೋ ಆಟದ ತರಬೇತಿ ನೀಡಲಾಗುತ್ತಿದ್ದು ಇದು ಅವರ ಶಿಕ್ಷಣದ ಭಾಗವಾಗಿತ್ತು. ಇದಕ್ಕೆ ತರಬೇತಿ ಹೊಂದಿದ ಕುದುರೆಗಳನ್ನು ಬಳಸಲಾಗುತ್ತಿತು. ಮುಂದೆ ಇದೇ ಆಟವು ಟೆಂಟ್ ಪೆಗ್ಗಿಂಗ್ನಂತಹ ಆಟಗಳು ರೂಢಿಗೆ ಬರಲು ಕಾರಣವಾಯಿತು. ಜೊತೆಗೆ ಕುದುರೆ ರೇಸ್ ಸಹ ಮೈಸೂರು ಅರಸರಿಗೆ ಪ್ರಿಯವಾಗಿದ್ದು 1891ರಲ್ಲಿ ಅಂದಿನ ಮಹಾರಾಜರಾದ ಚಾಮರಾಜಒಡೆಯರು ಪ್ರಥಮ ಬಾರಿಗೆ ಸಂಸ್ಥಾನದಲ್ಲಿ ಕುದುರೆ ಪಂದ್ಯ ಆಯೋಜಿಸಲು ಒಂದು ಉಸ್ತುವಾರಿ ಸಮಿತಿಯನ್ನೂ ನೇಮಿಸಿದ್ದರು. ಮೊದಲು ಕುದುರೆ ರೇಸ್ ಕಬ್ಬೆಕಟ್ಟೆ ಮೈದಾನ (JC Engineering College) ನಡೆಸಲಾಗುತ್ತಿದ್ದು ನಾಲ್ವಡಿಯವರ ಕಾಲದಲ್ಲಿ ಪ್ರಸ್ತುತದ ವಿಶಾಲವಾದ ಬಯಲಿಗೆ ಇದನ್ನು ಶಿಫ್ಟ್ ಮಾಡಲಾಯಿತು.

ಒಟ್ಟಾರೆ ಮೈಸೂರು ಆಳರಸರ ಪ್ರೋತ್ಸಾಹದಿಂದಾಗಿ ಸಂಸ್ಥಾನದಲ್ಲಿ ಕ್ರೀಡಾಕ್ಷೇತ್ರವು ತ್ವರಿತ ಪ್ರಗತಿಯನ್ನು ಸಾಧಿಸಲಾರಂಭಿಸಿತು. ಇದಕ್ಕೆ ಪಾಶ್ಚಾತ್ಯೀಕರಣದ ಸ್ಪರ್ಶವು ಸಹ ಕಾರಣವಾಯಿತು. ಮಹಾರಾಜರಾಗಿದ್ದ 10ನೇ ಚಾಮರಾಜ ಒಡೆಯರ್

ಬೌದ್ಧಿಕ ಶಿಕ್ಷಣ ಮಾತ್ರವಲ್ಲದೆ, ದೈಹಿಕ ಶಿಕ್ಷಣಕ್ಕೂ ನೀಡಬೇಕಾದ ಆದ್ಯತೆ ಮನಗಂಡು 1894ರಲ್ಲಿ ಸರ್ಕಾರಿ ಆದೇಶ ಹೊರಡಿಸುವ ಮೂಲಕ ಮೈಸೂರು ಸಂಸ್ಥಾನದಲ್ಲಿ ದಸರಾ ಅಂತರ್ ಶಾಲಾ ಕ್ರೀಡಾಕೂಟ ಆರಂಭಿಸಿ ಶಾಲೆಗಳು ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಗಮನ ನೀಡುವಂತೆ ಪ್ರೇರೇಪಿಸಿದರು. ನಾಲ್ವಡಿಯವರು 1913ರಲ್ಲಿ SSLC ಪಠ್ಯಕ್ರಮದಲ್ಲಿ ಡ್ರಿಲ್ ತರಗತಿಗಳನ್ನು ಸೇರ್ಪಡೆಗೊಳಿಸಿ ಹಾಗೂ ವೇಳಾಪಟ್ಟಿಯಲ್ಲಿ ಕ್ರೀಡಾ ಸಮಯ ನಿಗದಿಮಾಡುವ ಮೂಲಕ ಆಟದ ಮೈದಾನದಲ್ಲಿ ವಿದ್ಯಾರ್ಥಿಗಳ ಹಾಜರಾತಿ ತೆಗೆದುಕೊಳ್ಳುವ ವ್ಯವಸ್ಥೆ ಜಾರಿಗೆ ತಂದರು. 1937ರಲ್ಲಿ SSLC ಪಠ್ಯ ಪರಿಷ್ಕರಿಸಿದಾಗ ದೈಹಿಕ ಶಿಕ್ಷಣವನ್ನು ಶಾಲಾಕೋರ್ಸ್‌ನ ಭಾಗವೆಂದು ಪರಿಗಣಿಸಿ ದೈಹಿಕ ಶಿಕ್ಷಣ ಶಿಕ್ಷಕರಿಗೆ ತರಬೇತಿ ಕಡ್ಡಾಯಗೊಳಿಸಿದರು. ಶಿಕ್ಷಕರನ್ನು ತರಬೇತಿಗಾಗಿ ಬೆಂಗಳೂರಿನ ಯಂಗ್‌ಮನ್ ಕ್ರಿಶ್ಚಿಯನ್ ಅಸೋಸಿಯೇಷನ್ ಫಿಸಿಕಲ್ ಕಲ್ಚರ್ ಟ್ರೈನಿಂಗ್ ಸೆಂಟರ್‌ಗೆ ಕಳುಹಿಸಲಾಗುತ್ತಿತ್ತು. 1944–45ರ ಅವಧಿಯಲ್ಲಿ ಈ ರೀತಿಯ 5 ತರಬೇತಿ ಶಾಲೆಗಳಿದ್ದುದ್ದರ ಬಗ್ಗೆ ಮಾಹಿತಿ ದೊರೆಯುತ್ತದೆ (The National Institute of Physical Education, YMCA, The Yoga and Physical Culture Institute, Vyayamashala, Naidu's Physical Culture Institute) 1944ರಲ್ಲಿ ಸಂಸ್ಥಾನದ ಎಲ್ಲಾ ಮಕ್ಕಳಿಗೆ ಲಿಂಗಭೇಧವಿಲ್ಲದೇ ಶಾಲಾಹಂತದಲ್ಲಿ ಕಡ್ಡಾಯವಾಗಿ ದೈಹಿಕಶಿಕ್ಷಣ ನೀಡುವಂತೆ ಆದೇಶಹೊರಡಿಸಿತು. ಇವು ಸಂಸ್ಥಾನದಲ್ಲಿನ ಕ್ರೀಡಾ ಬೆಳವಣಿಗೆಗೆ ಹಿಡಿದ ಕೈಗನ್ನಡಿ.

## ಪರಾಮರ್ಶನ ಗ್ರಂಥಗಳು:


1. ಭಾರತಿ ಎಚ್. ಎಮ್. (2021). ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಳ್ವಿಕೆ, ಆಡಳಿತ ಮತ್ತು ಸುಧಾರಣೆಗಳು: ಒಂದು ಅಧ್ಯಯನ 1902–1941. ಪಿಎಚ್.ಡಿ ಮಹಾಪ್ರಬಂಧ. ಸಬ್ಮಿಟೆಡ್ ಟು ಯುನಿವರ್ಸಿಟಿ ಆಫ್ ಮೈಸೂರು.
2. ಅನಿತ ಎಮ್. ಎಸ್. (2016). ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪರಿವರ್ತನಾಶೀಲ ಸಂಪ್ರದಾಯಬದ್ದ ಸಮಾಜದ ಮೇಲೆ ಪಾಶ್ಚಿಮಾತ್ಯ ಪ್ರಭಾವ: ಒಂದು ಸಮಗ್ರ ಅಧ್ಯಯನ 1894–1940. ಪಿಎಚ್.ಡಿ. ಮಹಾಪ್ರಬಂಧ. ಸಬ್ಮಿಟೆಡ್ ಟು ಯುನಿವರ್ಸಿಟಿ ಆಫ್ ಮೈಸೂರು.
3. ಮಂಜುನಾಥ್ ಎಸ್. ಜೆ. (2016). ಮೈಸೂರು ಅರಮನೆ ಆಡಳಿತದಲ್ಲಿ ಪೋಲೀಸ್ ವ್ಯವಸ್ಥೆ: ಒಂದು ಸಾಂಸ್ಕೃತಿಕ ಅಧ್ಯಯನ 1868–1940. ಪಿಎಚ್.ಡಿ. ಮಹಾಪ್ರಬಂಧ. ಸಬ್ಮಿಟೆಡ್ ಟು ಯುನಿವರ್ಸಿಟಿ ಆಫ್ ಮೈಸೂರು.
4. ಚಿಕ್ಕಮಾದು ಎನ್. ಎನ್. (2019). ಅಭಿವೃದ್ದಿಯ ಹರಿಕಾರ ನಾಲ್ವಡಿ ಕೃಷ್ಣರಾಜ ಒಡೆಯರು. ಪ್ರೇಮ ಪ್ರಕಾಶನ. ಮೈಸೂರು.
5. Nandagopal Choodamani. (2012). Ganjifa: The Indian playing cards, Aventure. The Jain University Quarterly Journal.
6. Sampath Vikram. (2008). Splendours of royal Mysore the untold story of the Wodeyars. New Delhi.
7. Nagendra Prasad S. (08 Aug 2019). Hunting a royal pastime. Deccan Herald. https://www.deccanherald.com/india/karnataka/hunting-a-royal-pastime-751724.html